# ನಿಮ್ಮನ್ನು
# ಹೆಚ್ಚು ಅರಿಯಲು
# ನಮಗೆ
# ಸಹಾಯಮಾಡಿ

HSBC

The world's local bank

# ನಿಮ್ಮ ಗ್ರಾಹಕರನ್ನು ಅರಿತುಕೊಳ್ಳಿ
# ಮತ್ತು
# ಹಣದ ಖಾತೆ ಬದಲಾವಣೆ ವಿರೋಧ

## ಗ್ರಾಹಕ ಜಾಗೃತಿ

### ಹಣದ ಖಾತೆ ಬದಲಾವಣೆ (ಮನಿ ಲಾಂಡರಿಂಗ್) ಮತ್ತು ಭಯೋತ್ಪಾದನಾ ಧನಸಹಾಯ (ಟೆರರಿಸ್ಟ್ ಫಿನಾನ್ಸಿಂಗ್) ಎಂದರೇನು ?

ಹಣದ ಖಾತೆ ಬದಲಾವಣೆಯಲ್ಲಿ ಯಾವ ಅಕ್ರಮ ಚಟುವಟಿಕೆ ಆರ್ಥಿಕ ಸೊತ್ತುಗಳನ್ನು ಸೃಷ್ಟಿಸಿತೊ ಅದು ಪತ್ತೆಯಾಗದಂತೆ ಅವುಗಳನ್ನು ಬಳಸುವ ಉದ್ದೇಶದಿಂದ ಅವನ್ನು ಮರೆಮಾಚಲಾಗುತ್ತದೆ. ಹಣದ ಖಾತೆ ಬದಲಾವಣೆಯ ಮೂಲಕ, ಅಪರಾಧಿ ಚಟುವಟಿಕೆಯಿಂದ ಪಡೆದ ಆರ್ಥಿಕ ಹುಟ್ಟುವಳಿಗಳನ್ನು ಖಾತೆ ಬದಲಾಯಿಸುವವರು ತೋರಿಕೆಯ ಕಾನೂನುಸಮ್ಮತ ಮೂಲದ ನಿಧಿಗಳಿಗೆ ಪರಿವರ್ತಿಸುತ್ತಾರೆ .

ಭಯೋತ್ಪಾದನಾ ಧನಸಹಾಯವೆಂದರೆ, ಯಾವುದೇ ರೂಪದಲ್ಲಿ ಭಯೋತ್ಪಾದನೆಯನ್ನು, ಅಥವಾ ಅದಕ್ಕೆ ಬೆಂಬಲ ನೀಡುವವರನ್ನು, ಅದನ್ನು ಯೋಜಿಸುವವರನ್ನು ಅಥವಾ ಅದರಲ್ಲಿ ತೊಡಗುವವರನ್ನು ಆರ್ಥಿಕವಾಗಿ ಪ್ರೋತ್ಸಾಹಿಸುವುದು. ಭಯೋತ್ಪಾದನೆಯ ಮೂಲಗಳು ನ್ಯಾಯಸಮ್ಮತವಾಗಿರಬಹುದು ಅಥವಾ ಅಲ್ಲದಿರಬಹುದು. ಈ ಎರಡೂ ಚಟುವಟಿಕೆಗಳಿಗೆ ಪರಸ್ಪರ ಸಂಬಂಧವಿದೆ, ಏಕೆಂದರೆ ಹಣದ ಖಾತೆ ಬದಲಾವಣೆಗೆ ಬಳಕೆಯಾಗುವ ತಂತ್ರಗಳು ಧನಸಹಾಯದ ಮೂಲಗಳನ್ನೂ ಉಪಯೋಗಗಳನ್ನೂ ಗುಪ್ತವಾಗಿರಿಸಲು ಬಳಸಲ್ಪಡುವ ತಂತ್ರಗಳೇ ಆಗಿವೆ.

### ಹಣದ ಖಾತೆ ಬದಲಾವಣೆ ಅಪರಾಧವೆಂದರೆ ಏನು ?

2002ರ ಪ್ರಿವೆನ್ಷನ್ ಆಫ್ ಮನಿ ಲಾಂಡರಿಂಗ್ ಆ್ಯಕ್ಟ್ (ಪಿ ಎಮ್‌ಎಲ್‌ಎ) ಅಂತರ್ಗತ, ಅಪರಾಧದ ಹುಟ್ಟುವಳಿಗಳಿಗೆ ಸಂಬಂಧಪಟ್ಟ ಯಾವುದೇ ಪ್ರಕ್ರಿಯೆ ಅಥವಾ ಚಟುವಟಿಕೆಯಲ್ಲಿ ನೇರವಾಗಿ ಯಾ ಪರೋಕ್ಷವಾಗಿ ತೊಡಗಲು ಯತ್ನಿಸಿ, ಅಥವಾ ತಿಳಿದು ಅದಕ್ಕೆ ಸಹಾಯಮಾಡಿ ಅಥವಾ ತಿಳಿದು ಅದರಲ್ಲಿ ಭಾಗವಹಿಸಿ ಅಥವಾ ವಾಸ್ತವದಲ್ಲಿ ನಿರತರಾಗಿ, ಮತ್ತು ಅದನ್ನು ಕಳಂಕರಹಿತ ಆಸ್ತಿಯೆಂದು ಹವಣಿಸುವ ಯಾರೇ ಆಗಲಿ, ಹಣದ ಖಾತೆ ಬದಲಾವಣೆ ಅಪರಾಧಿಯಾಗುತ್ತಾರೆ.

### ಕೆವೈಸಿ ಎಂದರೇನು?

ಕೆವೈಸಿ ಎಂದರೆ 'ನೋ ಯುವರ್ ಕ್ಲಯಂಟ್/ಕಸ್ಟಮರ್ 'ಎನ್ನುವುದರ ಸಂಕ್ಷಿಪ್ತ ರೂಪ. ಗ್ರಾಹಕ ಗುರುತು ಪ್ರಕ್ರಿಯೆಗಾಗಿ (ಕ್ಲಯಂಟ್ ಐಡೆಂಟಿಫಿಕೇಷನ್ ಪ್ರಾಸೆಸ್) ಈ ಪದಗುಚ್ಛವನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ಬ್ಯಾಂಕ್‌ಗಳಿಗೆ ಅವುಗಳ ಗ್ರಾಹಕರನ್ನೂ ಅವರ ಆರ್ಥಿಕ ವ್ಯವಹಾರಗಳನ್ನೂ ತಿಳಿಯಲು/ಅರ್ಥಮಾಡಿಕೊಳ್ಳಲು ಕೆವೈಸಿ ಸಹಾಯ ಮಾಡುತ್ತದೆ; ಇದರ ಮೂಲಕ ಬ್ಯಾಂಕ್‌ಗಳು ತಮ್ಮ ಆಪತ್ತುಗಳನ್ನು ನಿರ್ವಹಿಸಲೂಬಹುದು, ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲೂಬಹುದು.

### ಕೆವೈಸಿ ಕಡ್ಡಾಯವೆ ?

ಹೌದು, ಇದು ಒಂದು ನಿಯಾಮಕ ಮತ್ತು ಕಾನೂನುರೀತ್ಯಾ ಅಗತ್ಯವಾಗಿದೆ. 2004ರ ನವೆಂಬರ್ 29ರಂದು ನೋ ಯುವರ್ ಕಸ್ಟಮರ್ (ಕೆವೈಸಿ) ಸ್ಟಾಂಡರ್ಡ್ಸ್ – ಆ್ಯಂಟಿ ಮನಿ ಲಾಂಡರಿಂಗ್ (ಎ ಎಮ್‌ಎಲ್) ಮೆಷರ್ಸ್ – ಇದರ ಕುರಿತು ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ನೀಡಿದ ಮಾರ್ಗದರ್ಶಿ ಸೂತ್ರಗಳ ಪ್ರಕಾರ, ಬ್ಯಾಂಕ್‌ಗಳು ಕೆವೈಸಿ ಮಾನಕಗಳನ್ನು ಮತ್ತು ಎ ಎಮ್‌ಎಲ್ ಕ್ರಮಗಳನ್ನು ಒಳಗೊಳ್ಳುವ ಒಂದು ಸಮಗ್ರ ನೀತಿ ಚೌಕಟ್ಟು ಅಳವಡಿಸಿಕೊಳ್ಳುವುದು ಅಗತ್ಯ .ಬ್ಯಾಂಕ್‌ಗಳು, ಆರ್ಥಿಕಸೇವಾ ಸಂಸ್ಥೆಗಳು ಹಾಗೂ ಮಧ್ಯವರ್ತಿಗಳು ಈ ಕಾಯಿದೆ ಮತ್ತು ಅದರಡಿಯಲ್ಲಿ ನಿರೂಪಿತವಾಗಿರುವ 'ನಿಯಮ 'ಗಳಲ್ಲಿ ಸೂಚಿಸಲಾಗಿರುವಂತೆ ಕೆವೈಸಿ ಮತ್ತು ಎ ಎಮ್‌ಎಲ್‌ನ ನಿದಿರ್ಷ್ಟ ಕನಿಷ್ಠ ಮಾನಕಗಳನ್ನು ಖಾತರಿಯಾಗಿ ಅನುಸರಿಸಬೇಕು ಎಂದು 2005ರ ಜುಲಾಯಿ 1ರಂದು ಜಾರಿಗೆ ಬಂದ ಪಿಎಮ್‌ಎಲ್‌ಎ ವಿಧಿಸುತ್ತದೆ.

## ಬ್ಯಾಂಕ್‌ಗಳು ಗ್ರಾಹಕರ ಗುರುತಿನ ಪರಿಶೀಲನೆಯನ್ನು ಯಾವಾಗ ಮಾಡುತ್ತವೆ?

ಪಿಎಮ್‌ಎಲ್‌ಎ ಪ್ರಕಾರ, ಒಂದು ಖಾತೆಯನ್ನು ತೆರೆಯುವಾಗ ಅಥವಾ ಅದರಲ್ಲಿ ಯಾವುದೇ ವಹಿವಾಟು ನಡೆಸುವಾಗ ಗ್ರಾಹಕರ ಗುರುತು ಮತ್ತು ಕಾಯಂ ವಿಳಾಸ ಅಥವಾ ವಿಳಾಸಗಳೂ ಸೇರಿದಂತೆ ಪ್ರಸಕ್ತದ ವಿಳಾಸ ಅಥವಾ ವಿಳಾಸಗಳ, ಗ್ರಾಹಕರ ವ್ಯವಹಾರದ ಸ್ವಭಾವ ಮತ್ತು ಅವರ ಆರ್ಥಿಕ ಸ್ಥಾನಮಾನದ ದಾಖಲೆಯನ್ನು ಪರಿಶೀಲಿಸಬೇಕು.

## ನಾನು ಬ್ಯಾಂಕಿಗೆ ನೀಡಬೇಕಾದ ಗುರುತಿನ ಪುರಾವೆ ಯಾವುದು?

ಅತ್ಯುತ್ತಮ ಗುರುತು ದಾಖಲೆಗಳೆಂದರೆ ಸರಕಾರಿ ಪ್ರಾಧಿಕಾರದ ಮೂಲಕ ನೀಡಲ್ಪಟ್ಟಂಥವು, ಒಂದು ಛಾಯಾಚಿತ್ರ, ವಿಳಾಸ ಮತ್ತು ಹಸ್ತಾಕ್ಷರವನ್ನು ಪಡೆದಂಥವು. ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ ಪಾಸ್‌ಪೋರ್ಟ್, ಮತದಾರ ಗುರುತು ಚೀಟಿ, ಡ್ರೈವಿಂಗ್ ಲೈಸೆನ್ಸ್, ಸರಕಾರಿ ಗುರುತು ಚೀಟಿ, ರಕ್ಷಣಾಪಡೆ ಗುರುತುಚೀಟಿ, ಫೋಟೊ ಪಿಎ ಎನ್ ಕಾರ್ಡ್, ಫೋಟೊ ಪಡಿತರ ಚೀಟಿ – ಇವು ಗ್ರಾಹಕರ ಗುರುತನ್ನು ಸಾಬೀತುಪಡಿಸಲು ಸಾಕಾಗುತ್ತವೆ.

ವೈಯಕ್ತಿಕವಲ್ಲದ ಖಾತೆಗಳ ಸಂದರ್ಭದಲ್ಲಿ, ವೈಯಕ್ತಿಕ ರುಜುದಾರರ ಗುರುತಿನ ಸಲುವಾಗಿ ಉಲ್ಲೇಖಿತವಾಗಿರುವ ಕಾಗದಪತ್ರಗಳಿಗೆ ಹೆಚ್ಚುವರಿಯಾಗಿ, ಈ ಕೆಳಗಿನವು ಬೇಕಾಗುತ್ತವೆ:

ಏಕಮಾತ್ರ ಸ್ವಾಮ್ಯದ ವ್ಯವಹಾರ ಸಂಸ್ಥೆಗಳು, ಪಾಲುದಾರಿಕಾ ವ್ಯವಹಾರ ಸಂಸ್ಥೆಗಳು, ಮರ್ಯಾದಿತ ಹಾಗೂ ಖಾಸಗಿ ಮರ್ಯಾದಿತ ಕಂಪೆನಿಗಳು, ಸೊಸಾಯಿಟಿಗಳು, ಟ್ರಸ್ಟ್‌ಗಳು (ನ್ಯಾಸಗಳು), ಹಿಂದೂ ಅವಿಭಜಿತ ಕುಟುಂಬ (ಎಚ್‌ಯುಎಫ್) – ವ್ಯವಹಾರ ಸಂಸ್ಥೆಯ ಮಾರಾಟ/ಸೇವಾ ತೆರಿಗೆ/ಎಕ್ಸೈಸ್ ನೋಂದಣಿ, ಶಾಪ್ಸ್ ಆ್ಯಂಡ್ ಎಸ್ಟಾಬ್ಲಿಷ್‌ಮೆಂಟ್ಸ್ ಕಾಯಿದೆಯಡಿಯ ನೋಂದಣಿ, ಪಿ ಎ ಎನ್ ಗುರುತುಚೀಟಿ / ಆದಾಯ ತೆರಿಗೆ (ಐಟಿ) ರಿಟರ್ನ್. ವ್ಯವಹಾರ ಸಂಸ್ಥೆಯ ಹೆಸರಿನ ನೀರಿನ/ವಿದ್ಯುಚ್ಛಕ್ತಿಯ/ಮುನಿಸಿಪಲ್ ತೆರಿಗೆಯ ಬಿಲ್, ಪಾಲುದಾರಿಕಾ ವ್ಯವಹಾರಸಂಸ್ಥೆಗಳಿಗಾಗಿ ಒಂದು ಪಾಲುದಾರಿಕಾ ಡೀಡ್.

ಮರ್ಯಾದಿತ ಮತ್ತು ಖಾಸಗಿ ಮರ್ಯಾದಿತ ಕಂಪೆನಿಗಳಿಗಾಗಿ ಹೆಚ್ಚುವರಿ ರೂಪದಲ್ಲಿ –ಮೆಮೊ (ಕರಾರು ದಸ್ತೈವಜು) ಮತ್ತು ಸಂಘದ ನಿಬಂಧನೆಗಳು, ಏಕೀಕರಣ ಪ್ರಮಾಣಪತ್ರ, ಮಂಡಲಿ ಠರಾವು, ಶೇರ್‌ಹೋಲ್ಡಿಂಗ್ ವಿನ್ಯಾಸವನ್ನು ಸ್ಥಾಪಿಸುವ ಉದ್ದೇಶದಿಂದ ರಿಜಿಸ್ಟ್ರಾರ್ ಆಫ್ ಕಂಪೆನೀಸ್ ಇವರಲ್ಲಿ ಸಲ್ಲಿಸಲಾದ ವಾರ್ಷಿಕ ರಿಟರ್ನಿನ ಪ್ರತಿ, ರಿಜಿಸ್ಟ್ರಾರ್ ಆಫ್ ಕಂಪೆನೀಸ್ ಇವರಲ್ಲಿ ಸಲ್ಲಿಸಲಾದ ಫಾರ್ಮ್ 32ರ ಪ್ರಮಾಣಿತ ಪ್ರತಿ. ಶೇರ್‌ಹೋಲ್ಡಿಂಗ್ ವಿನ್ಯಾಸವನ್ನು ಗುರುತಿಸಲು, ವಾರ್ಷಿಕ ಸಾಮಾನ್ಯ ಸಭೆಯ (ಎ ಜಿಎಮ್) ನಂತರ ವಾರ್ಷಿಕ ರಿಟರ್ನನ್ನು ಸಲ್ಲಿಸಬೇಕು. ಸೊಸಾಯಿಟಿಗಳಿಗಾಗಿ ಇನ್ನೂ– ಸೊಸಾಯಿಟಿ ಯಾವ ಪ್ರಕಾರದ್ದು ಎಂಬುದನ್ನು ಅವಲಂಬಿಸಿ ಸಂದರ್ಭಕ್ಕೆ ತಕ್ಕಂತೆ ರಿಜಿಸ್ಟ್ರಾರ್ ಆಫ್ ಕೊ–ಒಪರೇಟಿವ್ ಸೊಸಾಯಿಟೀಸ್ ಅಥವಾ ಸಬ್– ರಿಜಿಸ್ಟ್ರಾರ್ ಆಫ್ ಅಶ್ಯೂರೆನ್ಸ್ – ಇವರೊಂದಿಗೆ ಸೊಸಾಯಿಟಿ ನೋಂದಣಿಯ ಪ್ರಮಾಣಪತ್ರದ/ಬೈಲಾಗಳ/ಸಂಘದ ಕರಾರು ದಸ್ತೈವಜಿನ/ಸಂವಿಧಾನದ ಪ್ರಮಾಣಿತ ಬೆಳಕುಪ್ರತಿ.

ಖಾತೆ ತೆರೆಯುವಿಕೆ ಮತ್ತು ಹಸ್ತಾಕ್ಷರ ನಮೂದಿನ ಸೂಚನೆಗಳ ಸಲುವಾಗಿ ಸಂಘದ ಕರಾರು ದಸ್ತೈವಜು/ಬೈಲಾಗಳಲ್ಲಿ ಪಟ್ಟಿಮಾಡಲ್ಪಟ್ಟಂತೆ ವ್ಯವಸ್ಥಾಪಕ ಸಮಿತಿ/ಮಂಡಲಿ/ಆಫೀಸ್‌ಬೇರರ್ಸ್ ಮಂಜೂರು ಮಾಡಿದ ಠರಾವು, ಪಿಎಎನ್ ಕಾರ್ಡ್/ಪಿಎಎನ್ ನಿಗದಿಮಾಡುವ ಪತ್ರ.

ಟ್ರಸ್ಟ್ ಖಾತೆಗಳು – ಟ್ರಸ್ಟ್ ಡೀಡ್‌ನ ಪ್ರತಿ, ಚ್ಯಾರಿಟಿ ಕಮಿಷನರ್ ಐಟಿ ರಿಟರ್ನ್ಸ್ ನೀಡಿರುವ ನೋಂದಣಿ ಪ್ರಮಾಣಪತ್ರ ಮತ್ತು ಟ್ರಸ್ಟ್‌ಗಳು ಚ್ಯಾರಿಟಿ ಕಮಿಷನರ್‌ಗೆ ಸಲ್ಲಿಸುವ ರಿಟರ್ನ್ಸ್‌ನ ಬೆಳಕುಪ್ರತಿ, ಖಾತೆ ತೆರೆಯಲು ಟ್ರಸ್ಟೀಗಳು ಮಂಜೂರು ಮಾಡಿದ ಠರಾವು.

ಎಚ್‌ಯುಎಫ್ ಖಾತೆಗಳ ಸಲುವಾಗಿ – ಎಚ್‌ಯುಎಫ್‌ನ ಪಿಎ ಎನ್ ಐಡಿ .

*ಮೇಲಿನದು ಒಂದು ಸಂಪೂರ್ಣ ಯಾದಿ ಅಥವಾ ಮಾಹಿತಿಯಲ್ಲ, ಕೇವಲ ಒಂದು ಚಿತ್ರ ಎಂಬುದನ್ನು ದಯವಿಟ್ಟು ಗಮನಿಸಿ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ಶಾಖೆಗಳಲ್ಲಿ ನಮ್ಮನ್ನು ಅವಶ್ಯವಾಗಿ ಸಂಪರ್ಕಿಸಿ, ನಮ್ಮ ಫೋನ್ ಬ್ಯಾಂಕಿಂಗ್ ಸಂಖ್ಯೆಗಳ ಮೂಲಕ ನಮಗೆ ಕರೆಮಾಡಿ ಅಥವಾ info@hsbc.co.in ಇಲ್ಲಿ ನಮಗೆ ಪತ್ರ ಬರೆಯಿರಿ.*

## ಕೆವೈಸಿ ಉದ್ದೇಶಗಳಿಗಾಗಿ ಶಾಖೆಯಲ್ಲಿ ನನ್ನ ಸಂಪರ್ಕ ವ್ಯಕ್ತಿ ಯಾರು ?

ಬ್ಯಾಂಕ್‌ನಲ್ಲಿ ನಿಮ್ಮ ಜೊತೆ ಸಂಪರ್ಕದಲ್ಲಿರುವವರು ನಿಮ್ಮ ರಿಲೇಷನ್‌ಶಿಪ್ ಮ್ಯಾನೇಜರ್ ಅಥವಾ ನಿಮ್ಮ ಖಾತೆಯನ್ನು ತೆರೆದುಕೊಟ್ಟ ಮತ್ತು ನಿಮ್ಮ ವಹಿವಾಟುಗಳ ಸಲುವಾಗಿ ನಿಮ್ಮ ಜೊತೆ ಸತತ ಸಂಪರ್ಕವಿರಿಸಿಕೊಳ್ಳುವ ಅಧಿಕಾರಿ.

## ಕೆವೈಸಿ ಮಾಹಿತಿಯನ್ನು ಬ್ಯಾಂಕ್ ಏನು ಮಾಡುತ್ತದೆ ?

ಖಾತೆ ತೆರೆಯುವ ಸಮಯದಲ್ಲಿ/ಚಾಲ್ತಿಯಾಗಿ ಬ್ಯಾಂಕ್ ಸಂಗ್ರಹಿಸುವ ಗ್ರಾಹಕ ಮಾಹಿತಿ ವಿವರಗಳನ್ನು ಗೌಪ್ಯವಾಗಿ ಇರಿಸಲಾಗುವುದು ಮತ್ತು ಅನ್ವಯವಾಗುವ ಕಾನೂನು ಮತ್ತು ನಿಯಾಮಕ ಕಟ್ಟುಪಾಡುಗಳಿಗೆ ಅನುಗುಣವಾಗಿ ಅಗತ್ಯವಿದ್ದರೆ ಮಾತ್ರ ಅವನ್ನು ಯಾವುದೇ ವ್ಯಕ್ತಿಗೆ ಬಹಿರಂಗಪಡಿಸಲಾಗುತ್ತದೆ ,ಇಲ್ಲವಾದರೆ ಇಲ್ಲ .

## ನಾನು ಅಗತ್ಯದ ಕೆವೈಸಿ ಮಾಹಿತಿ /ಕಾಗದಪತ್ರಗಳನ್ನು ಬ್ಯಾಂಕಿಗೆ ನೀಡದಿದ್ದರೆ ಏನಾಗುವುದು?

ಕೆವೈಸಿ ಮಾಹಿತಿ/ಕಾಗದಪತ್ರಗಳನ್ನು ಒದಗಿಸದೆ ಇದ್ದ ಕಾರಣವನ್ನು ಉಲ್ಲೇಖಿಸಿ, (ನೀವು ಓರ್ವ ಭಾವಿ ಗ್ರಾಹಕರಾಗಿದ್ದರೆ) ಖಾತೆ ತೆರೆಯದಿರುವ ಅಥವಾ (ನೀವು ಈಗಿನ ಗ್ರಾಹಕರಾಗಿದ್ದರೆ) ನಿಮ್ಮ ಜೊತೆ ಸಂಬಂಧ ಕಡಿದುಕೊಳ್ಳುವ ಅಧಿಕಾರ ಬ್ಯಾಂಕಿಗಿದೆ. ಹಾಗಿದ್ದೂ ದಿನಾಂಕ ಆಗಸ್ಟ್ 23, 2005ರ ಆರ್‌ಬಿಐ ಡಿಬಿಒಡಿ ಸುತ್ತೋಲೆ ಸಂ. ಎ ಎಮ್‌ಎಲ್. ಬಿಸಿ. 28/14.01.001/2005-2006 ಇದು ಕೊಡುವ ಸ್ವಾತಂತ್ರ್ಯಕ್ಕೆ ಅನುಗುಣವಾಗಿ ಅಗತ್ಯದ ಕಾಗದಪತ್ರಗಳನ್ನು ಒದಗಿಸಲು ಅಸಮರ್ಥರಾಗಿರುವ ಕೆಲವು ವರ್ಗದ ಗ್ರಾಹಕರ ಸಲುವಾಗಿ ಬ್ಯಾಂಕ್ ಖಾತೆ ತೆರೆಯುತ್ತದೆ.

HSBC
The world's local bank

*Issued by The Hongkong and Shanghai Banking Corporation Limited, India. Incorporated in Hongkong SAR with limited liability*